# ನಿಮ್ಮೊಡನೆ

## ಬಂದ್ ಮತ್ತು ಹಿಂಸಾಚಾರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಬಂದ್ ಎನ್ನುವುದು ಒಂದು ಪರಿಣಾಮಕಾರಿ ಪ್ರತಿಭಟನೆಯ ಅಸ್ತ್ರ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಬಂದ್ ನೆಪದಲ್ಲಿ ಹಿಂಸಾಚಾರವನ್ನು ಸಮರ್ಥಿಸುವುದು ಎಂದಿಗೂ ಸರಿಯಲ್ಲ.

'ಊರು ಬಂದ್ ಆಯಿತು, ನೀರು ಬಂದ್ ಆಗಲಿಲ್ಲ' ಎಂದೊಬ್ಬರು ಕಳೆದ ವಾರ ನಿಟ್ಟುಸಿರು ಬಿಟ್ಟರು. ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದ ಹಿನ್ನೆಲೆಯಲ್ಲಿ ಅದನ್ನು ತಡೆಯಲು ರಾಜ್ಯದ ವಿವಿಧೆಡೆ ಬಂದ್ ಆಗಿದ್ದರ ಬಗ್ಗೆ ಅವರ ಪ್ರತಿಕ್ರಿಯೆಯಲ್ಲಿ ಹತಾಶೆಯೂ ಇತ್ತು. ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಂತೂ 'ಕಾವೇರಿ ಬಂದ್' ವಿಪರೀತ ಪರಿಣಾಮಗಳನ್ನು ಉಂಟು ಮಾಡಿತು. ಹತ್ತಾರು ಬಸ್‌ಗಳು, ಲಾರಿಗಳು, ಕಟ್ಟಡಗಳು ಬೆಂಕಿಗೆ ಆಹುತಿಯಾದವು. ದುಡಿದು ತಿನ್ನುವ ವರ್ಗಕ್ಕೆ ಸೇರಿದ ಇಬ್ಬರು ಅಮಾಯಕರು ಪ್ರಾಣ ಕಳೆದುಕೊಂಡರು. ಅಂಗಡಿ, ಮಳಿಗೆಗಳು ಲೂಟಿಯಾದವು. ಒಂದು ದಿನವಂತೂ, ಬೆಂಗಳೂರಿನಲ್ಲಿ ಶಾಲೆಗಳಿಂದ ಮಕ್ಕಳನ್ನು ಅರ್ಧದಿನಕ್ಕೇ ಮನೆಗೆ ವಾಪಸ್ ಕಳುಹಿಸಲು ನಿರ್ಧರಿಸಿದಾಗ ಸಹಸ್ರಾರು ಪೋಷಕರು ಆತಂಕದಿಂದ ಕಂಗಾಲಾಗಿ ಓಡಾಡಬೇಕಾಯಿತು. ಪ್ರತಿದಿನವೂ ದುಡಿದರೆ ಮಾತ್ರ ಅನ್ನ ಹುಟ್ಟುವ ಸಹಸ್ರಾರು ಕೂಲಿ ಕಾರ್ಮಿಕರು ಬಂದ್ ಮತ್ತು ಪ್ರತಿಭಟನೆಗಳಿಂದಾಗಿ ನರಕಹಿಂಸೆ ಅನುಭವಿಸಿದರು. ಎಲ್ಲದರ ಒಟ್ಟು ಫಲವಾಗಿ ತಮಿಳುನಾಡಿಗೆ ಹರಿದುಹೋದ ಕಾವೇರಿ ನೀರಂತೂ ನಿಲ್ಲಲಿಲ್ಲ. ಬದಲಾಗಿ ನಮ್ಮ ರಾಜ್ಯದಲ್ಲಿ ಒಟ್ಟು 25 ಸಾವಿರ ಕೋಟಿ ರೂಪಾಯಿಗಳ ಲುಕ್ಸಾನು ಆಯಿತು ಎಂದು ಉದ್ಯಮ ವಲಯಗಳು ಅಂದಾಜು ಮಾಡಿದವು. ವಿಪರ್ಯಾಸವೆಂಬಂತೆ 'ನಮಗೇ ಕುಡಿಯಲು ನೀರಿಲ್ಲ' ಎಂದು ಅಲವತ್ತುಕೊಳ್ಳುತ್ತಿದ್ದ ಬೆಂಗಳೂರಿನ ನಾಗರಿಕರು ಅಂದು ಬೆಂಕಿ ನಂದಿಸಲೆಂದೇ ಎಷ್ಟೋ ಲಕ್ಷ ಲೀಟರ್ ನೀರನ್ನು ಸುರಿಯಬೇಕಾಯಿತು!

ಬಂದ್ ಮಾಡುವುದರಿಂದ, ಹಿಂಸೆಗೆ ಇಳಿಯುವುದರಿಂದ ಗುರಿ ಸಾಧಿಸಲು ಸಾಧ್ಯವೆ? ಎನ್ನುವುದೀಗ ಮತ್ತೆ ಮುನ್ನೆಲೆಗೆ ಬಂದಿರುವ ಚರ್ಚೆಯ ವಿಷಯ. ಬಂದ್ ಮತ್ತು ಹಿಂಸಾಚಾರ ಭುಗಿಲೆದ್ದರೆ ಗುರಿ ಸಾಧನೆ ಆಗುವುದಿಲ್ಲ ಎನ್ನುವಂತೆಯೂ ಇಲ್ಲ! ಕೆಲವೇ ತಿಂಗಳ ಹಿಂದೆ ಕಾರ್ಮಿಕರ ಭವಿಷ್ಯನಿಧಿ ಹಣದ ಹೂಡಿಕೆಗೆ ಸಂಬಂಧಿಸಿ ಹಲವು ನಿರ್ಬಂಧಗಳನ್ನು ಪ್ರಕಟಿಸಿದ ಕೇಂದ್ರ ಸರ್ಕಾರದ ವಿರುದ್ಧ ಸಾವಿರಾರು ಜನ ಬೀದಿಗಿಳಿದು ಪ್ರತಿಭಟಿಸಿದ್ದರು. ಅವತ್ತೂ ಬೆಂಗಳೂರು ಬಂದ್ ಆಗಿದ್ದಲ್ಲದೆ, ಕಲ್ಲುತೂರಾಟ, ಅಗ್ನಿಸ್ಪರ್ಶ ಪ್ರಕರಣಗಳು ನಡೆದವು. ಕಾರ್ಮಿಕರ ಹಿಂಸೆಗೆ ಭಯಬಿದ್ದ ಸರ್ಕಾರ ಭವಿಷ್ಯನಿಧಿ ಕುರಿತ ನಿರ್ಬಂಧಗಳನ್ನು ತಕ್ಷಣ ಹಿಂತೆಗೆದುಕೊಂಡಿತು. ಆದರೆ ಕಾವೇರಿ ನೀರು ಹರಿಸುವ ವಿಷಯದಲ್ಲಿ ಅದಾಗಲಿಲ್ಲ. ಸರ್ಕಾರ ಜನರ ಸಿಟ್ಟಿಗೆ ಹೆದರುವುದಕ್ಕಿಂತ ಹೆಚ್ಚಾಗಿ ಸುಪ್ರೀಂಕೋರ್ಟ್ ಸಿಟ್ಟಿಗೆ ಹೆದರಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಬಂದ್ ಎನ್ನುವುದು ಒಂದು ಪರಿಣಾಮಕಾರಿ ಪ್ರತಿಭಟನೆಯ ಅಸ್ತ್ರ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಬಂದ್‌ಗೆ ಕರೆ ನೀಡಿದ ಸಂಘಟನೆಗಳು ಬಂದ್ ಸಮಯದಲ್ಲಿ ಆಗುವ ಎಲ್ಲ ಅನಾಹುತಗಳ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು ಎಂದು ಯಾರಾದರೂ ಬಯಸಿದರೆ ಅದರಲ್ಲೇನು ತಪ್ಪಿದೆ? ಬಂದ್‌ಗೆ ಕರೆ ಕೊಡುವಾಗ ಎಲ್ಲರೂ ಶಾಂತಿಯುತ ಬಂದ್ ಎಂದೇ ಹೇಳಿಕೆ ಕೊಡುತ್ತಾರೆ. ಆದರೆ ಕರೆಕೊಡುವ ಸಂಘಟನೆಗಳ ಮಧ್ಯೆ ಒಮ್ಮತ ಇಲ್ಲವಾದಲ್ಲಿ ಅಥವಾ ಬೀದಿಗಿಳಿದವರ ಮೇಲೆ ಈ ಸಂಘಟನೆಗಳಿಗೆ ಯಾವುದೇ ನಿಯಂತ್ರಣ ಇಲ್ಲವಾದಲ್ಲಿ ಅನಾಹುತಗಳು ಸಂಭವಿಸುತ್ತವೆ. ಸಮಾಜಘಾತುಕ ಶಕ್ತಿಗಳು ಪ್ರತಿಭಟನೆಯ ಲಾಭ ಪಡೆದು ಸಾರ್ವಜನಿಕ ಆಸ್ತಿ ಪಾಸ್ತಿಗಳ ಲೂಟಿ ನಡೆಸುವುದಂತೂ ಅಕ್ಷಮ್ಯ. ಅದರಲ್ಲೂ ಪ್ರತಿಭಟನೆಯ ವಿಷಯ ವಿಭಿನ್ನ ಜನವರ್ಗಗಳ ಮಧ್ಯೆ, ಭಾಷಿಕರ ಮಧ್ಯೆ ದ್ವೇಷವನ್ನು ಹುಟ್ಟುಹಾಕುವಂತದ್ದಾಗಿದ್ದರೆ ಆಗುವ ನಷ್ಟ ಅಪಾರ. ಭೌತಿಕ ನಷ್ಟದ ಲೆಕ್ಕ ಹಾಕಬಹುದು. ಆದರೆ ಜನರ ಮಧ್ಯೆ ಭಾಷೆಯ ಹೆಸರಲ್ಲಿ, ಪ್ರದೇಶದ ಹೆಸರಲ್ಲಿ ಉಂಟಾಗುವ ದುರ್ಭಾವನೆಯ ನಷ್ಟದ ಲೆಕ್ಕ ಇಡುವವರು ಯಾರು? ಬಹುಭಾಷೆಯ, ಬಹುಸಂಸ್ಕೃತಿಯ ದೇಶದಲ್ಲಿ ಇಂತಹ ಸಂಘರ್ಷಗಳಿಂದ ಒಟ್ಟು ಸಮಾಜಕ್ಕೆ ಆಗುವ ಅಪಾಯದ ಪರಿಣಾಮ ದೀರ್ಘಕಾಲಿಕವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಅಂತರರಾಜ್ಯ ವಿವಾದಗಳು ಹೆಚ್ಚುತ್ತಿವೆ. ಪರಸ್ಪರ ರಾಜ್ಯ ಸರ್ಕಾರಗಳ ಮುಖ್ಯಸ್ಥರು ಒಂದೆಡೆ ಕುಳಿತು ಸದ್ಭಾವನೆಯಿಂದ, ಮುತ್ಸದ್ದಿತನದಿಂದ ಬಗೆಹರಿಸಲು ಸಾಧ್ಯವಿರುವ ವಿವಾದಗಳೂ ಕೋರ್ಟು ಮೆಟ್ಟಿಲೇರಿ ಕಗ್ಗಂಟಾಗಿ ಪರಿಣಮಿಸುತ್ತಿವೆ. ಕಾವೇರಿ ಜಲಹಂಚಿಕೆ ವಿವಾದ ಇಂದು ನಿನ್ನೆಯದಲ್ಲ. ಇಂತಹ ವಿವಾದಗಳಿಗೆ ಸಂಬಂಧಿಸಿ ತೀರ್ಪು ನೀಡುವ ನ್ಯಾಯಮೂರ್ತಿಗಳೂ ಸಾಕಷ್ಟು ಸಾಮಾಜಿಕ ಎಚ್ಚರ ವಹಿಸಬೇಕಾದ ಸಂದರ್ಭ ಈಗಿನದ್ದು. ಇಲ್ಲವಾದಲ್ಲಿ ನಮ್ಮ ಒಕ್ಕೂಟ ವ್ಯವಸ್ಥೆಯೇ ಶಿಥಿಲಗೊಳ್ಳುವ ಅಪಾಯವಿದೆ. ಅದೇನೇ ಇದ್ದರೂ ಬಂದ್ ನೆಪದಲ್ಲಿ ಹಿಂಸಾಚಾರವನ್ನು ಸಮರ್ಥಿಸುವುದು ಎಂದಿಗೂ ಸರಿಯಲ್ಲ.

■ ಬಿ.ಎಂ.ಹನೀಫ್



ಈಶ್ವರ್